

ಫುಟ್‌ಬಾಲ್ ಆಟದ ಮಧ್ಯೆ ಏನಿವನ ವಿಶೇಷ ಪ್ರದರ್ಶನ? ಬ್ರಿಟಿಷ್ ಕೊಲಂಬಿಯದಲ್ಲಿ ನಡೆದ ಪಂದ್ಯದಲ್ಲಿ ಈ ಸ್ಟ್ಯಾಕರ್ ಇಬ್ಬಿಬ್ಬರು ಭದ್ರತಾ ಸಿಬ್ಬಂದಿಯನ್ನು ಉರುಳಿಸಿ ಓಡಿರುವ ಪರಿ ನೋಡಿದರೆ ಈತ ಮೈದಾನದಾಚೆ ಒಳ್ಳೆಯ ಆಟಗಾರನೇ ಇರಬಹುದು.

ನಷ್ಟ, ಲಾಭ ಎರಡನ್ನೂ ಸರಿದೂಗಿಸಬೇಕಾ? ಹಾಗಾದರೆ ದೇಹದ ತೂಕ ನಷ್ಟ ಮಾಡಿಕೊಳ್ಳಿ, ಪರ್ಸ್ ತೂಕ ಹೆಚ್ಚಿಸಿಕೊಳ್ಳಿ ಎಂದು ಅಮೆರಿಕದ ಟಿವಿ ಚಾನೆಲ್ ‘ದಿ ಬಿಗ್ಗೆಸ್ಟ್ ಲೂಸರ್’ ಕಾರ್ಯಕ್ರಮ ಶುರು ಮಾಡಿದೆ. ದೇಹದ ತೂಕ ಒಂದೊಂದೇ ಪೌಂಡ್ ಕಡಿಮೆಯಾಗುತ್ತ ಹೋದಂತೆ ಪರ್ಸ್‌ನಲ್ಲಿ ಒಂದೊಂದೇ ಪೌಂಡ್ ಹಣ ಹೆಚ್ಚುತ್ತ ಹೋಗುತ್ತದೆ. ಕೊನೆಗೆ ಎರಡೂವರೆ ಲಕ್ಷ ಡಾಲರ್ ಬಹುಮಾನ ಗೆಲ್ಲುವ ಅವಕಾಶ. ಅಂದರೆ ತೂಕ ಎಷ್ಟು ಇಳಿಸಬೇಕು?



ಪತಿಯನ್ನು ಬೇಕಾದರೂ ಬಿಡುವೆ, ಬೆಕ್ಕುಗಳನ್ನು ಬಿಡಲಾರೆ ಎಂದು ಇಸ್ರೇಲಿನ ಲ್ಯಾಟಿನ್ ಅಮೆರಿಕ ರಾಯಭಾರಿಯ ಹೆಂಡತಿ ಕೋರ್ಟ್‌ಗೆ ಹೋಗಿದ್ದಾಳೆ. ಆತನೂ ಅಷ್ಟೆ, ಹೆಂಡತಿಯ ಒಡವೆ, ಬಟ್ಟೆ ಜೊತೆ ಆಕೆ ಸಾಕಿದ್ದ 40 ಬೆಕ್ಕುಗಳನ್ನು ಒಯ್ದಿದ್ದಾನಂತೆ. ಹೆಂಡತಿ ಬೆಕ್ಕುಗಳ ಸೇವೆ ಮಾಡುತ್ತ, ಅವುಗಳನ್ನೇ ಮುದ್ದಿಸುತ್ತ ಕೂತರೆ ಆತ ತಾನೇ ಏನು ಮಾಡಿಯಾನು?

ಕಾಡು ಸುತ್ತಾಡುವವರಿಗೆ ಹೀಗೊಂದು ಆಕೃತಿ ಧುತ್ತನೆ ಎದುರಾದರೆ... ಆದಿಮಾನವರಲ್ಲೂ ಬಾಡಿ ಪೇಂಟಿಂಗ್ ಇತ್ತು ಎಂಬುದಕ್ಕೆ ಸಖತ್ ಪುರಾವೆ ದಕ್ಕಿದ ಖುಷಿಯಲ್ಲಿ ಯುರೇಕಾ ಎಂದು ಓಡಬಹುದು. ಇದು ಆಸ್ಟ್ರಿಯಾದಲ್ಲಿ ಈಚೆಗೆ ನಡೆದ ಬಾಡಿ ಪೇಂಟಿಂಗ್ ಸ್ಪರ್ಧೆಯ ಒಂದು ಝಲಕ್.





ಬಿಹಾರದಲ್ಲಿ ದೇವಿಗಳ ಕಾಟ ಜಾಸ್ತಿಯಾಗಿದೆ. ಆಗ ರಾಬ್ರಿಯ ಜೋರಾದರೆ, ಈಗ ಈ ಎಂಎಲ್‌ಸಿ ಜ್ಯೋತಿಯ ಎರ್ರಾಬಿರ್ರಿ. ಒಳಗೆ ಚಪ್ಪಲಿ, ಕುರ್ಚಿಯ ಜೊತೆ ಫುಟ್‌ಬಾಲ್ ಆಡಿದರೆ, ಹೊರಗೆ ಪಾಟ್‌ಗಳ ಜೊತೆ ಷಾಟ್‌ಪುಟ್.

ಯುವತಿಯನ್ನು ಒಲಿಸಿಕೊಳ್ಳಲು ಏನು ಮಾಡಬೇಕು? ಒಡವೆ, ಉಡುಪು, ದುಬಾರಿ ಉಡುಗೊರೆಗಳ ಸುರಿಮಳೆ...? ಇಲ್ಲ, ರೋಮ್ಯಾಂಟಿಕ್ ಹಾಡು ಕೇಳಿಸಿ ಎನ್ನುತ್ತಾರೆ ಫ್ರಾನ್ಸ್‌ನ ಸಂಶೋಧಕರು. ಪ್ರೇಮ ಗೀತೆ ಕಿವಿಗೆ ಬಿದ್ದೊಡೆ ಯುವತಿಯರು ಇನಿಯನ ಬಳಿ ಧಾವಿಸುತ್ತಾರಂತೆ. ಅದಕ್ಕೆ ಅಲ್ಲವೇ ಮತ್ತೆ ಭಾರತದ ಸಿನಿಮಾಗಳಲ್ಲಿ ಅಷ್ಟೊಂದು ಪ್ರೇಮ ಗೀತೆ, ನೃತ್ಯ ತುರುಕುವುದು.



ಕ್ವೀನ್ಸ್‌ಲ್ಯಾಂಡ್‌ನ ಆಳ ಸಮುದ್ರದಲ್ಲಿರುವ ಏಂಜೆಲ್ ಫಿಶ್. ಅಲಂಕಾರಕ್ಕೆ ಇಷ್ಟೆಲ್ಲ ಟೂಲ್ ಬಳಸಿದೆ ಎಂದರೆ ಹೆಣ್ಣು ಮೀನೇ ಇರಬಹುದು. ರ್‍ಯಾಂಪ್ ಮೇಲೆ ನಡೆಯುವ ರೂಪದರ್ಶಿಗಳ ಚಿತ್ರವಿಚಿತ್ರ ಅಲಂಕಾರಕ್ಕೆ ಇಂಥ ಜೀವಿಗಳೇ ಮಾಡೆಲ್ ಇರಬಹುದೇ?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65